
# ಪ್ರೇಮದ ಮಾಂತ್ರಿಕತೆಗೆ ಕುಂದಿಲ್ಲ



ನಾನು ಮದುವೆಯಾಗಿ ಒಂದೂವರೆ ತಿಂಗಳು ಕಳೆಯಿತಷ್ಟೆ. ನಾನು ನನ್ನ ಬಾಳಸಂಗಾತಿಯನ್ನು ಮೊದಲು ಭೇಟಿಯಾಗಿದ್ದು ಸೋಷಿಯಲ್ ಮೀಡಿಯಾದಲ್ಲಿಯೇ.

ಆಧುನಿಕ ಸಂವಹನದ ಸಾಧನಗಳಿಂದ ಇಂದು ಗಂಡು ಹೆಣ್ಣು ಭೇಟಿಯಾಗುವುದು ಸುಲಭವಾಗಿದೆ. ಮಾತಾಡುವುದೂ ಸುಲಭವಾಗಿದೆ. ಆ ಮೂಲಕ ಅವರು ಇನ್ನಷ್ಟು ಆಪ್ತರಾಗಿ ಜೊತೆಗೆ ಒಂದಿಷ್ಟು ಸಮಯವನ್ನೂ ಕಳೆಯಬಹುದು. ಅದು ತಪ್ಪಲ್ಲ; ಅದೇ ಪ್ರೇಮವೂ ಅಲ್ಲವಲ್ಲ.

ಸೋಷಿಯಲ್ ಮೀಡಿಯಾ ಎನ್ನುವುದು ಒಂದು ವರ್ಚುವಲ್ ಸೊಸೈಟಿ ಅಷ್ಟೆ. ಅಲ್ಲಿ ನಮ್ಮ ಮುಖ ತೋರಿಸಬೇಕಾದ ಅಗತ್ಯ ಇರುವುದಲ್ಲ. ಹಾಗಾಗಿ ಯಾವುದೋ ಹುಡುಗಿಗೆ, ಹುಡುಗನಿಗೆ ಪ್ರೇಮನಿವೇದನೆ ಮಾಡುವ ಧೈರ್ಯ ಸಿಗಬಹುದು. ಅಲ್ಲಿಯವರೆಗೆ ಈ ಎಲ್ಲ ತಂತ್ರಜ್ಞಾನಗಳು ಸಂವಹನದ ದಾರಿಯನ್ನು ಸುಲಭಗೊಳಿಸಿವೆ ಅನ್ನುವುದನ್ನು ಒಪ್ಪಿಕೊಳ್ಳಬಹುದು. ಆದರೆ ಗಂಡು– ಹೆಣ್ಣಿನ ನಡುವೆ ಪ್ರೇಮ ಪಲ್ಲವಿಸುವ ಕ್ಷಣ ಇರುತ್ತದಲ್ಲ, ಅದು ತುಂಬ ದೈವಿಕವಾದ ಗಳಿಗೆ. ಅದು ಖಂಡಿತ ಈಗಲೂ ಬದಲಾಗಿಲ್ಲ. ಸೋಷಿಯಲ್ ಮೀಡಿಯಾಗಳಲ್ಲಿ, ವಾಟ್ಸ್‌ಆ್ಯಪ್‌ಗಳಲ್ಲಿ ಎಷ್ಟೇ ಮಾತಾಡಿಕೊಂಡಿರಲಿ, ಎದುರಿಗೆ ಭೇಟಿಯಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ ಆಗುವ ಮಿಂಚಿನ ಸಂಚಾರದ ಅನುಭವವನ್ನು ಯಾವ ಆ್ಯಪ್ ಕೂಡ ಕೊಡಲು ಸಾಧ್ಯವಿಲ್ಲ. ಅದೊಂದು ಮ್ಯಾಜಿಕಲ್ ಮೊಮೆಂಟ್. ಪ್ರೇಮದ ಆ ಶಕ್ತಿ ಈಗಲೂ ಹಾಗೆಯೇ ಉಳಿದಿದೆ. ಅದರ ಮೌಲ್ಯ ಕಿಂಚಿತ್ ಕುಂದಿಲ್ಲ.

ಇನ್ನು ಒಬ್ಬ ನಿರ್ದೇಶಕನಾಗಿ ಹೇಳುವುದಾದರೂ ತೆರೆಯ ಮೇಲೆ ಪ್ರೇಮಿಸುವ ರೀತಿ ಬದಲಾಗಿದೆಯೇ ಹೊರತು ಪ್ರೇಮಕಥೆಗಳ ನವಿರುತನವಾಗಲಿ, ಅದನ್ನು ಹೇಳುವ ಉತ್ಸಾಹದಲ್ಲಾಗಲಿ ಯಾವುದೇ ಬದಲಾವಣೆ ಆಗಿಲ್ಲ. ಹಿಂದೆ ಪತ್ರಕ್ಕಾಗಿ ಕಾಯುವ, ಮನೆಯವರ ಕಣ್ಣುತಪ್ಪಿಸಿ ಭೇಟಿಯಾಗುವ ದೃಶ್ಯಗಳು ಇಂದು ಪ್ರಸ್ತುತ ಅಲ್ಲ. ಆದರೆ ಪತ್ರಗಳ ಬದಲು ವಾಟ್ಸ್‌ಆ್ಯಪ್ ಇದೆ. ತನ್ನ ವಾಟ್ಸ್‌ಆ್ಯಪ್ ಮೆಸೇಜ್ ಅನ್ನು ಸಂಗಾತಿ ಓದಿರುವನೋ/ಳೋ ಇಲ್ಲವೋ ಎಂದು ಕಾಯುವಿಕೆಯಲ್ಲಿಯೇ ವಿರಹದ ಭಾವ ಅಭಿವ್ಯಕ್ತಿಗೊಳ್ಳುತ್ತದೆ.

ಹಿಂದಿನ ಕಾಲಕ್ಕೆ ಹೋಲಿಸಿದರೆ ಈಗಿನವು ಅಷ್ಟೊಂದು ರೊಮ್ಯಾಂಟಿಕ್ ಅಲ್ಲ ಅನಿಸಬಹುದು. ಆದರೆ ಇನ್ನೊಂದು ನೂರು ವರ್ಷ ಬಿಟ್ಟು ನೋಡಿದರೆ ಈ ವಾಟ್ಸ್ ಆ್ಯಪ್ ಪ್ರೇಮವೇ ಹೆಚ್ಚು ರೊಮ್ಯಾಂಟಿಕ್ ಅನಿಸಬಹುದು. ಹಾಗಾಗಿ 'ಪ್ರೇಮ'ವೆಂಬುದು ಹೊಸ ಸಂವಹನ ಸಾಧ್ಯತೆಗಳಿಂದ ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡಿದೆಯೇ ಹೊರತು ದುರ್ಬಲಗೊಂಡಿಲ್ಲ ಎಂದೇ ನನ್ನ ಅನಿಸಿಕೆ.

ಬದಲಾವಣೆ ಇರುವುದು ನಿಜ. ಈ ಬದಲಾವಣೆ ಕುತೂಹಲಕಾರಿಯಾಗಿದೆ. ಮಜವಾಗಿದೆ. ಪ್ರೇಮವನ್ನು ಇನ್ನಷ್ಟು ಜೀವಂತಗೊಳಿಸುವ ಹಾಗಿದೆ.

**ಅರವಿಂದ ಶಾಸ್ತ್ರಿ, ನಿರ್ದೇಶಕ**

ತೆರೆದುಕೊಂಡಿದೆ. ಫೇಸ್‌ಬುಕ್ ಯಾವ ಪರಿ ವೇಗದಲ್ಲಿ ಬೆಳೆಯಿತೆಂದರೆ ಅದು ಕಾರ್ಯಾರಂಭ ಮಾಡಿದ ಎರಡೇ ವರ್ಷಕ್ಕೆ ಅಂದರೆ 2014ರಲ್ಲಿ ಗೂಗಲ್, ಆರ್ಕುಟ್ ಅನ್ನು ನಿಲ್ಲಿಸಿತು! ಇಂದು ಫೇಸ್‌ಬುಕ್ ಅತ್ಯಂತ ಜನಪ್ರಿಯ ಕಂಪನಿ. ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಮ್, ಒಕ್ಯುಲಸ್ ಹೀಗೆ ಹಲವು ಪ್ಲಾಟ್‌ಫಾರಂಗಳನ್ನು ಕೊಂಡುಕೊಂಡು, ಜಗತ್ತಿನ ದೊಡ್ಡ ಜನಾಭಿಪ್ರಾಯ ರೂಪಿಸುವ ಕಂಪನಿಯಾಗಿ ಬೆಳೆದು ನಿಂತಿದೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್‌ಆ್ಯಪ್ ಇವೆಲ್ಲವೂ ಇಂದು ಸಂವಹನದ ಪ್ರಮುಖ ಪರಿಕರಗಳಾಗಿವೆ. ಸಹಜವಾಗಿ ಇವು 'ಪ್ರೇಮತಾಣ'ಗಳೂ ಆಗಿವೆ. ಹಾಗಾಗಿಯೇ ಇಂದಿನ ಬಹುತೇಕ ಪ್ರೇಮಿಗಳು ಭೇಟಿಯಾಗುವುದು ಅಥವಾ ಮೊದಲೇ ಪರಿಚಯ ಇದ್ದವರೂ ಪ್ರೇಮ ನಿವೇದನೆ ಮಾಡಿಕೊಳ್ಳುವುದು ಫೇಸ್‌ಬುಕ್ ಇಲ್ಲವೇ ವಾಟ್ಸ್‌ಆ್ಯಪ್ ಮುಖಾಂತರ. ನಂತರದ ಅವರ ಒಲವ ನದಿ



**ನೆನಪಾದಾಗೆಲ್ಲ ಬೆರಳ ತುದಿಗೆ ಮೂಡುವ, ಬಯಸಿದಾಗೆಲ್ಲ ಮಾತಿಗೆ ಸಿಕ್ಕುವ, ಡಾಟಾ ಮುಗಿಯುವವರೆಗೂ ಕಣ್ಣೋಟಕ್ಕೂ ದಕ್ಕುವ ಸಂಗಾತದ ಇಂದಿನ ಪ್ರೇಮ ಮಾಗುವುದು ಎಲ್ಲಿ?**